# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 28.01.2022ರಂದು ಪೂರ್ವಾಹ್ನ ಗಂಟೆ 10.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2022ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ನಡವಳಿಗಳು.**

## ಉಪಸ್ಥಿತ ಸದಸ್ಯರು:

| | | |
|---|---|---|
| 1. | ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ<br>ಕುಲಪತಿಗಳು<br>ಮಂಗಳೂರು ವಿಶ್ವವಿದ್ಯಾನಿಲಯ,<br>ಮಂಗಳಗಂಗೋತ್ರಿ–574199. | ಅಧ್ಯಕ್ಷರು |
| 2. | ಡಾ. ಶ್ರೀಧರ ಬಾಬು ಎ.ಜಿ.<br>ಜಂಟಿ ನಿರ್ದೇಶಕರು<br>ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ,<br>ಮಂಗಳೂರು – 575001.<br>(ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು |
| 3. | ಡಾ. ಜೆರಾಲ್ಡ್ ಸಂತೋಷ್ ಡಿ'ಸೋಜ<br>ಡೀನರು, ಶಿಕ್ಷಣ ನಿಕಾಯ ಹಾಗೂ ನಿರ್ದೇಶಕರು<br>ದೈಹಿಕ ಶಿಕ್ಷಣ ವಿಭಾಗ<br>ಮಂಗಳೂರು ವಿಶ್ವವಿದ್ಯಾನಿಲಯ,<br>ಮಂಗಳಗಂಗೋತ್ರಿ – 574 199. | – " – |
| 4. | ಪ್ರೊ. ಕರುಣಾಕರ್ ಎ. ಕೋಟೆಗಾರ್,<br>"ಶ್ರೀ ಅಣ್ಣಪ್ಪ", ಆರ್.ಪಿ.ನಗರ,<br>ಇಂದ್ರಾಳಿ ದೇವಸ್ಥಾನದ ಹತ್ತಿರ<br>ಉಡುಪಿ – 576 012. | – " – |
| 5. | ಶ್ರೀ ರವಿಚಂದ್ರ ಪಿ. ಎಂ.<br>ನಂ. 103, ಪೂಜನ್ ಎನ್‌ಕ್ಲೇವ್<br>6ನೇ ಅಡ್ಡ ರಸ್ತೆ, ಗಾಂಧಿ ನಗರ,<br>ಮಣ್ಣಗುಡ್ಡೆ, ಮಂಗಳೂರು – 575 001. | – " – |
| 6. | ಫಾದರ್ ಆಲ್ವಿನ್ ಸೆರಾವೊ<br>ಪ್ರಾಂಶುಪಾಲರು,<br>ಸಂತ ಆಂಟನಿ ಕಾಲೇಜ್ ಆಫ್ ಕಾಮರ್ಸ್<br>ನಾರಾವಿ ಪೋಸ್ಟ್,<br>ಬೆಳ್ತಂಗಡಿ ತಾಲೂಕು – 574 214. | – " – |

ಸದಸ್ಯರು

7. ಡಾ. ಶಂಕರ ಭಟ್
ಪ್ರಾಂಶುಪಾಲರು,
ಸರಕಾರಿ ಪ್ರಥಮ ದರ್ಜೆ ಕಾಲೇಜು,
ಕನ್ಯಾನ – 574 279.

8. ಶ್ರೀ ಪ್ರಸನ್ನ ಶೆಟ್ಟಿ  – " –
ಪ್ರಾಂಶುಪಾಲರು,
ಲಕ್ಷ್ಮೀ ಮೆಮೋರಿಯಲ್ ಕಾಲೇಜ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್
ಮಂಗಳೂರು – 575 003.

9. ಡಾ. ಸುಭಾಷಿನಿ ಶ್ರೀವತ್ಸ  – " –
ಪ್ರಾಂಶುಪಾಲರು,
ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು,
ಮಂಗಳೂರು - 575 001.

10. ಡಾ. ಎಂ. ಎಸ್. ತಳವಾರ,  – " –
ನಂ 777, "ಜೇನುಗೂಡು"
ಬನಶಂಕರಿ, 6ನೇ ಹಂತ, 5ನೇ ಬ್ಲಾಕ್,
ಮೆಟ್ಟಕಲ್ಲಪಾಳ್ಯ, ತಲಘಟ್ಟಪುರ ಅಂಚೆ – 560 109
ಬೆಂಗಳೂರು.

11. ಶ್ರೀ ಕೆ. ರಮೇಶ,  – " –
ನಂ. 1004, ಮಹಾಬಲೇಶ್ವರ ಕ್ಲಾಸಿಕ್ ರೂಬಿ,
ವಾಟರ್ ಟ್ಯಾಂಕ್ ಎದುರುಗಡೆ,
ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಹತ್ತಿರ,
ಶಕ್ತಿನಗರ, ಮಂಗಳೂರು – 575 016.

12. ಡಾ. ಪಾರ್ವತಿ ಅಪ್ಪಯ್ಯ,  – " –
"ಹಿಮವನ", ಮುಳಿಯಾ ಬಡಾವಣೆ
ಎಫ್.ಎಂ.ಕೆ.ಎಂ.ಸಿ. ಕಾಲೇಜು ಹಿಂಭಾಗ,
ಮಡಿಕೇರಿ ಅಂಚೆ, ಕೊಡಗು ಜಿಲ್ಲೆ

13. ಶ್ರೀ ಮೋಹನ್ ಪಡಿವಾಳ್,  – " –
"ಸಮೃದ್ಧ", ಎಂ.ಎಸ್. ನಗರ,
11ನೇ ಅಡ್ಡ ರಸ್ತೆ, ತೆಲ್ಲಾರ್ ರಸ್ತೆ,
ಕಾರ್ಕಳ, ಉಡುಪಿ ಜಿಲ್ಲೆ – 574 104.

14. ಶ್ರೀ ವಿವೇಕಾನಂದ ಪನಿಯಾಲ,  – " –
ಪನಿಯಾಲ ಹೌಸ್, ಕೊಡಿಯಾಳ ಗುತ್ತು
ಕೊಡಿಯಾಲ್ ಬೈಲು ಪೂರ್ವ ಮುಖ್ಯರಸ್ತೆ,
ಮಂಗಳೂರು – 575 004.

15. ಶ್ರೀ ರವೀಂದ್ರನಾಥ ರೈ, — ಸದಸ್ಯರು
ಬಿನ್ ದಿ. ಕ್ಯಾಪ್ಟನ್ ಬಾಲಕೃಷ್ಣ ರೈ. ಬಿ. ಎಸ್.
"ಲಕ್ಷ್ಮೀ ನಿವಾಸ" 3ನೇ ಕ್ರಾಸ್, ಕೊಡಿಯಾಲ್ ಗುತ್ತು ಪೂರ್ವ,
ಕೊಡಿಯಾಲ್ ಬೈಲ್ ಅಂಚೆ, ಮಂಗಳೂರು – 3.

16. ಪ್ರೊ. ವಿಶ್ವನಾಥ, — " –
ಪ್ರಾಧ್ಯಾಪಕರು,
ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ,
ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ – 574 199.

17. ಡಾ. ಸಿಪ್ರಿಯನ್ ಮೊಂತೆರೊ, — " –
ಪ್ರಾಂಶುಪಾಲರು ಮತ್ತು ಸಹ ನಿರ್ದೇಶಕರು,
ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು – 575001.
(ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ)

17. ಪ್ರೊ. ಪಿ. ಎಲ್. ಧರ್ಮ, — " –
ಕುಲಸಚಿವರು (ಪರೀಕ್ಷಾಂಗ)
ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ – 574 199.

18. ಪ್ರೊ. ಕಿಶೋರ್ ಕುಮಾರ್ ಸಿ.ಕೆ. — ಸದಸ್ಯ ಕಾರ್ಯದರ್ಶಿ
ಕುಲಸಚಿವರು (ಆಡಳಿತ)
ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ – 574 199

**ವಿಶೇಷ ಆಹ್ವಾನಿತರು:**

1. ಪ್ರೊ. ಬಿ. ನಾರಾಯಣ,
ಹಣಕಾಸು ಅಧಿಕಾರಿ (ಪ್ರಭಾರ)
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ – 574 199.

**ಅನುಪಸ್ಥಿತ ಸದಸ್ಯರು:**

1. ತಾಂತ್ರಿಕ ಶಿಕ್ಷಣ ನಿರ್ದೇಶಕರು, — ಸದಸ್ಯರು
ಕರ್ನಾಟಕ ರಾಜ್ಯ
ಅರಮನೆ ರಸ್ತೆ, ಬೆಂಗಳೂರು – 560 001.

2. ವೈದ್ಯಕೀಯ ಶಿಕ್ಷಣ ನಿರ್ದೇಶಕರು, — " –
ಕರ್ನಾಟಕ ರಾಜ್ಯ, ಆನಂದರಾವ್ ವೃತ್ತ
ಬೆಂಗಳೂರು – 560 009.

3. ನಿರ್ದೇಶಕರು, — " –
ಪದವಿ ಪೂರ್ವ ಶಿಕ್ಷಣ ಇಲಾಖೆ
ಪದವಿ ಪೂರ್ವ ಶಿಕ್ಷಣ ಭವನ,
18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ
ಮಲ್ಲೇಶ್ವರಂ, ಬೆಂಗಳೂರು – 560 003.

*********

## ಮಂಗಳೂರು ವಿಶ್ವವಿದ್ಯಾನಿಲಯ

ದಿನಾಂಕ 28.01.2022ರಂದು ಪೂರ್ವಾಹ್ನ ಗಂಟೆ 10.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2022ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ನಡವಳಿಗಳು.

ಉಪಸ್ಥಿತ ರು:

ಅನುಪಸ್ಥಿತ ರು:

**ಪ್ರಾರಂಭಿಕ**

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

➢ **ಸ್ವಾಗತ:**

- ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 28(1)(ಹೆಚ್)ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಪ್ರಾಧ್ಯಾಪಕರ ನೆಲೆಯಲ್ಲಿ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಪ್ರೊ. ವಿಶ್ವನಾಥ, ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ – 574199 ಇವರನ್ನು ಸಿಂಡಿಕೇಟ್ ಸಭೆಗೆ ಸ್ವಾಗತಿಸಿದರು.
- ಮಾನ್ಯ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ರಾಜ್ಯ ಸರ್ಕಾರ ಇವರ ಪರವಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಗಳಲ್ಲಿ ಭಾಗವಹಿಸಲು ಪ್ರತ್ಯಾಯೋಜಿಸಲಾಗಿರುವ ಮಂಗಳೂರಿನ ಪ್ರಾದೇಶಿಕ ಕಛೇರಿಯ ಜಂಟಿ ನಿರ್ದೇಶಕರಾದ ಶ್ರೀ. ಶ್ರೀಧರ ಬಾಬು ಎ.ಜಿ. ಇವರನ್ನು ಸಿಂಡಿಕೇಟ್ ಸಭೆಗೆ ಸ್ವಾಗತಿಸಿದರು.

➢ **ಕೃತಜ್ಞತೆ:**

- ಮಾನ್ಯ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ರಾಜ್ಯ ಸರ್ಕಾರ ಇವರ ಪರವಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಗಳಲ್ಲಿ ಭಾಗವಹಿಸಲು ಪ್ರತ್ಯಾಯೋಜಿಸಲಾಗಿದ್ದ ಡಾ.ಜೆನಿಫರ್ ಲೋಲಿಟಾ ಸಿ. ಇವರು ಸಿಂಡಿಕೇಟ್ ಸಭೆಗಳಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುತ್ತಾರೆ. ಇವರಿಗೆ ಸಿಂಡಿಕೇಟ್ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಪರವಾಗಿ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು.

**ಪ್ರಾಸ್ತಾವಿಕ**

**ಮಾನ್ಯ ಕುಲಪತಿಗಳು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಈ ಕೆಳಗಿನ ವಿಷಯಗಳನ್ನು ಸಭೆಗೆ ತಿಳಿಸಿದರು**

1. ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಸರಕಾರದ ಅನುಮತಿ ಬಂದ ಕೂಡಲೇ ಭರ್ತಿ ಮಾಡಲಾಗುವುದೆಂದು ತಿಳಿಸಿದರು..

2. ಬೆಳಪುವಿನಲ್ಲಿ ಸ್ನಾತಕೋತ್ತರ ಕೇಂದ್ರವನ್ನು ತೆರೆದು ಐದು ವಿಷಯಗಳ ಕಾರ್ಯಕ್ರಮಗಳನ್ನು ಮುಂದಿನ ಶೈಕ್ಷಣಿಕ ವರ್ಷದಿಂದಲೇ ನಡೆಸಲಾಗುವುದು.
3. ಹಣಕಾಸು ಅಧಿಕಾರಿಯವರನ್ನು ಬದಲಾವಣೆ ಮಾಡುವುದಾಗಿ ಸಭೆಗೆ ತಿಳಿಸಿದರು
4. ರಾಷ್ಟ್ರೀಯ ಹಬ್ಬವಾದ **ಅಗೋಸ್ತು 15** ಮತ್ತು **ಜನವರಿ 26ರಂದು** ಅನಿವಾರ್ಯ ಸಂದರ್ಭಗಳನ್ನು ಹೊರತುಪಡಿಸಿ ಕೋವಿಡ್‌ಗೆ ಸಂಬಂಧಪಟ್ಟ ಷರತ್ತಿಗೆ ಒಳಪಟ್ಟು ಎಲ್ಲಾ ಬೋಧಕ/ಬೋಧಕೇತರ ಸಿಬ್ಬಂದಿಗಳು, ಅತಿಥಿ ಉಪನ್ಯಾಸಕರು, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಕಡ್ಡಾಯವಾಗಿ ವಿಶ್ವವಿದ್ಯಾನಿಲಯದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಭಾಗವಹಿಸುವಂತೆ ಕ್ರಮಕೈಗೊಳ್ಳುವುದು.
5. ಕುಲಸಚಿವರು (ಪರೀಕ್ಷಾಂಗ) ಆಗಸ್ಟ/ಸೆಪ್ಟಂಬರ್ 2021 ಮತ್ತು ಅಕ್ಟೋಬರ್/ನವೆಂಬರ್ 2021ರಲ್ಲಿ ಹಾಗೂ ಎರಡು ವಿಶೇಷ ಪರೀಕ್ಷೆಗಳ – ಡಿಸೆಂಬರ್ 2021 ಮತ್ತು ಜನವರಿ 2022ರಲ್ಲಿ ಒಟ್ಟು ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ 1,32,046. ಎಂದು ತಿಳಿಸಿದರು.ಸ್ನಾತಕ ಪದವಿಯ 1, 3, 5, 6, 7 (BHM) ಮತ್ತು 8 (BHM) ಈ ಎಲ್ಲಾ ಸೆಮಿಸ್ಟರ್‌ಗಳ ಪರೀಕ್ಷೆಗಳ ಫಲಿತಾಂಶವನ್ನು 11.11.2021ರಂದು ಪೂರ್ಣಗೊಳಿಸಿ ಪ್ರಕಟಿಸಲಾಯಿತು. ಸ್ನಾತಕೋತ್ತರ ಪರೀಕ್ಷೆಗಳ ಫಲಿತಾಂಶವನ್ನು 2022 ಜನವರಿ 31ರ ಒಳಗಾಗಿ ಪ್ರಕಟಿಸಲಾಗುವುದೆಂದು ತಿಳಿಸಿದರು. ಡಿಸೆಂಬರ್ 2021 ಹಾಗೂ ಜನವರಿ 2022ರಂದು ನಡೆಸಿದ ವಿಶೇಷ ಪರೀಕ್ಷೆಗಳ [1, 2, 3, 4, 5] [ಸೆಮಿಸ್ಟರ್‌ಗಳು] ಫಲಿತಾಂಶವನ್ನು ಜನವರಿ 2022ರ ಒಳಗೆ ಪ್ರಕಟಿಸಲಾಗುವುದು. ಸಿಇಟಿ ಮತ್ತು ಕಾನೂನು ಪದವಿಯ ವಿದ್ಯಾರ್ಥಿಗಳಿಗೆ ಅನುಕೂಲ ಆಗುವ ರೀತಿಯಲ್ಲಿ ಆದ್ಯತೆಯ ಮೇರೆಗೆ ಫಲಿತಾಂಶವನ್ನು ನೀಡಲಾಗಿರುತ್ತದೆ. ಈ ಮೇಲಿನ ಎಲ್ಲಾ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಉತ್ತರ ಪತ್ರಿಕೆಗಳ ವೈಯಕ್ತಿಕ ವೀಕ್ಷಣೆ, ಉತ್ತರ ಪತ್ರಿಕೆಯ ನಕಲು ಪ್ರತಿ ಮತ್ತು ಅಂಕಗಳ ಮರು ಎಣಿಕೆಗೆ ಅವಕಾಶ ನೀಡಲಾಗಿತ್ತು. ಈ ಪ್ರಕ್ರಿಯೆಯು ಕೊನೆಗೊಂಡಿದ್ದು, ಮರು ಮೌಲ್ಯಮಾಪನದ ಕಾರ್ಯವು ದಿನಾಂಕ 31.01.2022ರಂದು ಪ್ರಾರಂಭಿಸಲಾಗುವುದು. 2018ನೇ ಸಾಲಿನಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಕೋವಿಡ್ 19ರ ಸವಲತ್ತು ಪಡೆದು ಬಾಕಿ ಇದ್ದ ನಾಲ್ಕನೇ ಸೆಮಿಸ್ಟರ್‌ನ ಫಲಿತಾಂಶವನ್ನು ಪ್ರಕಟಿಸಲಾಗಿದೆ.ಪದವಿ ಮಟ್ಟದ 2 ಮತ್ತು 4ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು Mulinx ಗೆ upload ಮಾಡಲು ಅವಕಾಶ ಮಾಡಿ ಕೊಡಲಾಗಿದೆ.
6. ಸ್ನಾತಕ ಹಾಗೂ ಸ್ನಾತಕೋತ್ತರ ಕಾರ್ಯಕ್ರಮಗಳ ಪ್ರವೇಶಾತಿ ಈಗಾಗಲೇ ಮುಗಿದಿರುತ್ತದೆ. ಸ್ನಾತಕೋತ್ತರ ಕಾರ್ಯಕ್ರಮಗಳಲ್ಲಿ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದಂತೆ ವಿಭಾಗಗಳ ಪ್ರವೇಶಾತಿಯು ಉತ್ತಮವಾಗಿದ್ದು, ವಾಣಿಜ್ಯ ವಿಷಯಗಳಲ್ಲಿ ಸಾಧಾರಣವಾಗಿದ್ದು ಮಾನವಿಕ ವಿಷಯಗಳಲ್ಲಿ ಬಹಳಷ್ಟು ಕಡಿಮೆ ವಿದ್ಯಾರ್ಥಿಗಳು ಪ್ರವೇಶಾತಿಯನ್ನು ಪಡೆದಿದ್ದಾರೆ ಎಂದು ಕುಲಸಚಿವರು ತಿಳಿಸಿದರು.

ಪರೀಕ್ಷಾ ಫಲಿತಾಂಶದ ವಿಳಂಬದಿಂದ ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ಪ್ರವೇಶ ಪಡೆಯಲು ಅನಾನುಕೂಲವಾದ ವಿದ್ಯಾರ್ಥಿಗಳಿಗೆ ಮತ್ತೊಮ್ಮೆ ಪ್ರವೇಶಾತಿಯ ಪ್ರಕಟಣೆ ನೀಡಿ ಅವಕಾಶ ನೀಡಲಾಗುವುದೆಂದು ಸಭೆಗೆ ತಿಳಿಸಲಾಯಿತು. ಮುಂದುವರಿದು ಸ್ನಾತಕೋತ್ತರ ಕಾರ್ಯಕ್ರಮಗಳ ಪ್ರವೇಶಾತಿ ಪ್ರಕ್ರಿಯೆಯನ್ನು ಪ್ರವೇಶಾತಿ ಘಟಕ(Admission Cell)ದಲ್ಲಿ ನಿರ್ಧರಿಸಿದಂತೆ ನಡೆಸಲಾಗುವುದು ಎಂದು ಕುಲಸಚಿವರು ತಿಳಿಸಿದರು.

ಕೋವಿಡ್ ಮೂರನೇ ಅಲೆಯ ಸಂದರ್ಭದಲ್ಲಿ ಈಗಾಗಲೇ ಸರಕಾರದ ಮತ್ತು ಜಿಲ್ಲಾಧಿಕಾರಿಗಳ ಮಾರ್ಗಸೂಚಿಗಳನ್ನು ಎಲ್ಲಾ ವಿಭಾಗಗಳಿಗೂ ಕಳುಹಿಸಿಕೊಡಲಾಗಿದೆ ಮತ್ತು ಮಾರ್ಗಸೂಚಿಗಳನ್ನು

ಅನುಸರಿಸಲು ತಿಳಿಸಲಾಗಿದೆ. ವಿಶ್ವವಿದ್ಯಾನಿಲಯದ ಆವರಣದಲ್ಲಿ RTCPR ಪರೀಕ್ಷೆ ನಡೆಸಲಾಗಿ ವಿದ್ಯಾರ್ಥಿಗಳಲ್ಲಿ Positive Cases ಹೆಚ್ಚು ಕಂಡು ಬಂದಿರುವುದರಿಂದ ಒಂದು ವಾರಗಳ ಕಾಲ Online ತರಗತಿಗಳನ್ನು ನಡೆಸಲು ನಿರ್ಧರಿಸಲಾಗಿದೆ. ಹಾಗೆಯೇ ವಿಶ್ವವಿದ್ಯಾನಿಲಯ ಕಾಲೇಜು , ಹಂಪನಕಟ್ಟೆ ಹಾಗೂ ಎಫ್ ಎಂ ಕೆ ಎಂ ಸಿ ಕಾಲೇಜು, ಮಡಿಕೇರಿ ಇಲ್ಲಿಯು ಹೆಚ್ಚಿನ ಸಂಖ್ಯೆಯಲ್ಲಿ Positive Cases ಕಂಡು ಬಂದಿರುವುದರಿಂದ ಒಂದು ವಾರಗಳ ಕಾಲ Online ತರಗತಿಗಳನ್ನು ನಡೆಸಲು ಸೂಚಿಸಲಾಗಿದೆಯಂದು ಸಭೆಗೆ ತಿಳಿಸಿದರು.

## I ನಡವಳಿಗಳ ದೃಢೀಕರಣ

ದಿನಾಂಕ 30.12.2021ರಂದು ನಡೆದ ಸಿಂಡಿಕೇಟಿನ 2021ನೇ ಸಾಲಿನ ಎಂಟನೆಯ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ:

ದಿನಾಂಕ 30.12.2021ರಂದು ನಡೆದ ಸಿಂಡಿಕೇಟಿನ 2021ನೇ ಸಾಲಿನ ಎಂಟನೆಯ ಸಾಮಾನ್ಯ ಸಭೆಯ ನಡವಳಿಯನ್ನು ಈ ಕೆಳಗಿನ ತಿದ್ದುಪಡಿಯೊಂದಿಗೆ ಅನುಮೋದಿಸಲಾಯಿತು.

1. ಈ ಕೆಳಗಿನ ಕಾರ್ಯಸೂಚಿ ಸಂಖ್ಯೆಗಳ ಬಗ್ಗೆ ತಿದ್ದುಪಡಿ ಮಾಡಲಾಯಿತು.

| ಕ್ರ. ಸಂ | ಕಾರ್ಯಸೂಚಿ ಸಂಖ್ಯೆ | ತಿದ್ದುಪಡಿ |
|---|---|---|
| 1 | ಎಸಿಸಿ:ಸಾ.ಸ.8:26(2021) | **ಆಡಳಿತ**:ಸಾ.ಸ.8:26(2021) |
| 2 | ಸಿಬ್ಬಂದಿ:ಸಾ.ಸ.8:82(2021) | **ಕಾನೂನು ಘಟಕ**:ಸಾ.ಸ.8:82(2021) |
| 3 | ಸಿಬ್ಬಂದಿ:ಸಾ.ಸ.8:83(2021) | **ಕಾನೂನು ಘಟಕ**:ಸಾ.ಸ.8:83(2021) |

2. ಇತರ ವಿಷಯದಲ್ಲಿನ ಕ್ರಮ ಸಂಖ್ಯೆ 2

**ತಿದ್ದುಪಡಿ ನಿರ್ಣಯ:** "M/s. Vaman Kamath" ಇವರ ಸೇವೆಯನ್ನು ಬಳಸಿಕೊಂಡು ಅತೀ ಶೀಘ್ರವಾಗಿ ಮುಕ್ತಾಯಗೊಳಿಸಲು ಹಾಗೂ double entry system ಬಗ್ಗೆ ಆದ ಕಾರ್ಯವನ್ನು ಪ್ರತೀ ವಾರ ಕುಲಪತಿಯವರ ಗಮನಕ್ಕೆ ತಂದು ಚರ್ಚಿಸಲು ಹಣಕಾಸು ಅಧಿಕಾರಿಯವರಿಗೆ ಸೂಚಿಸಲಾಯಿತು.

## II ಅನುಸರಣಾ ವರದಿಯ ಅನುಮೋದನೆ

ದಿನಾಂಕ 20.12.2021ರಂದು ನಡೆದ ಸಿಂಡಿಕೇಟಿನ 2021ನೇ ಸಾಲಿನ ಏಳನೇ ಸಾಮಾನ್ಯ ಸಭೆಯ ನಿರ್ಣಯಗಳ ಮೇಲೆ ತೆಗೆದುಕೊಂಡ ಕ್ರಮಗಳ ಅನುಸರಣಾ ವರದಿಯ ಅನುಮೋದನೆ

ಇತರ ವಿಷಯಗಳ ಕ್ರಮ ಸಂಖ್ಯೆ 2

**ತಿದ್ದುಪಡಿ ನಿರ್ಣಯ:** ಮ. ಆಟ್ರಿಸ್ ಟೆಕ್ನಾಲಜೀಸ್, ಬೆಂಗಳೂರು ಇವರು ಸಂಬಂಧಪಟ್ಟ ಎಲ್ಲಾ ಅಂಕವಹಿಗಳ ದಾಖಲೆಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ನಂತರ ಇದಕ್ಕೆ ಸಂಬಂಧಿಸಿ ಕುಲಸಚಿವರು (ಪರೀಕ್ಷಾಂಗ) ಇವರು ಅನಾಪೇಕ್ಷಣಾ ಪತ್ರ (No Objection Certification) ನೀಡಿದ ನಂತರ ಮೊತ್ತವನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ನಿರ್ಣಯಿಸಲಾಯಿತು.

### III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು

ಕಾರ್ಯಸೂಚಿ ಸಂಖ್ಯೆ:ಎಸಿಸಿ: ಸಾ.ಸ.1:1(2022)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯದ 40ನೇ ವಾರ್ಷಿಕ ಘಟಿಕೋತ್ಸವದ ಬಗ್ಗೆ.

ನಿರ್ಣಯ: ಗೌರವ ಡಾಕ್ಟರೇಟ್ ಬಗ್ಗೆ ಬಂದ 23 ಸದಸ್ಯರುಗಳ ಅರ್ಜಿಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಸದಸ್ಯರ ಒಮ್ಮತದ ಅಭಿಪ್ರಾಯದ ಮೇರೆಗೆ ಎಂಟು ಸದಸ್ಯರುಗಳ ಹೆಸರುಗಳನ್ನು ತಜ್ಞರ ಪರಿಶೀಲನಾ ಸಮಿತಿಗೆ ಸಲ್ಲಿಸಲು ನಿರ್ಣಯಿಸಲಾಯಿತು.

ಘಟಿಕೋತ್ಸವ ನಡೆಯುವ ದಿನಾಂಕ, ಘಟಿಕೋತ್ಸವದ ಮುಖ್ಯ ಅತಿಥಿಯ ಹೆಸರನ್ನು ಹಾಗೂ ಗೌರವ ಡಾಕ್ಟರೇಟ್ ಸಂಭಾವ್ಯರ ಪಟ್ಟಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಘನತೆವೆತ್ತ ರಾಜ್ಯಪಾಲರಿಗೆ ಕಳುಹಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ : ಸಾ.ಸ.1:2(2022)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗ, ಸ್ನಾತಕೋತ್ತರ ಕೇಂದ್ರ ಹಾಗೂ ಘಟಕ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಸಂಭಾವನೆ ನಿಗದಿ ಬಗ್ಗೆ.

ನಿರ್ಣಯ: ಪೂರ್ಣಕಾಲಿಕ ಮತ್ತು ಅರೆಕಾಲಿಕ ಅನ್ನುವ ಪದ ಉಪಯೋಗಿಸದೆ ಅತಿಥಿ ಉಪನ್ಯಾಸಕರೆಂದು ಪರಿಗಣಿಸುವುದು ಹಾಗೂ ಅತಿಥಿ ಉಪನ್ಯಾಸಕರುಗಳನ್ನು ನೇಮಕಾತಿ ಮಾಡಿಕೊಂಡಾಗ ರೋಸ್ಟರ್ ಪದ್ಧತಿ ಪರಿಗಣಿಸಲು ನಿರ್ಧರಿಸಲಾಯಿತು ಹಾಗೂ ಪ್ರತಿ ತಿಂಗಳು 10ನೇ ತಾರೀಖಿನ ಒಳಗಾಗಿ ಅತಿಥಿ ಉಪನ್ಯಾಸಕರ ಸಂಭಾವನೆಯನ್ನು ಪಾವತಿಸತಕ್ಕದ್ದು. ಈ ಕೆಳಗಿನ ಸಂಭಾವನೆಯನ್ನು ಫೆಬ್ರುವರಿ 2022ರಿಂದ ಅನ್ವಯವಾಗುವಂತೆ ನೀಡಲು ನಿರ್ಣಯಿಸಲಾಯಿತು.

| ಕ್ರ.ಸಂ | ವಿವರ | ಸಂಭಾವನೆ | | |
|---|---|---|---|---|
| | | ಬೋಧನಾ ತರಗತಿಗೆ ಪ್ರತಿ ಗಂಟೆಗೆ | ಪ್ರಾಯೋಗಿಕ ತರಗತಿಗೆ ಪ್ರತಿ ಗಂಟೆಗೆ | ಮಾಸಿಕ ಗರಿಷ್ಠ ಸಂಭಾವನೆ |
| 1. | UGC ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಹೊಂದಿರುವ ಅತಿಥಿ ಉಪನ್ಯಾಸಕರಿಗೆ | ರೂ 650/- | ರೂ 500/- | ರೂ.40,000/- |
| 2. | UGC ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಹೊಂದಿರದ ಅತಿಥಿ ಉಪನ್ಯಾಸಕರಿಗೆ | ರೂ.500/- | ರೂ 375/- | ರೂ 35,000/- |

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು : ಸಾ.ಸ.1:3(2022

ವಿಷಯ: ಸ್ನಾತಕೋತ್ತರ ರಸಾಯನಶಾಸ್ತ್ರ, (ಅನ್ವಯಿಕ ರಸಾಯನಶಾಸ್ತ್ರ, ಮತ್ತು ಸಾವಯವ ರಸಾಯನಶಾಸ್ತ್ರ, ಒಳಗೊಂಡಂತೆ) ಹಾಗೂ ಸ್ನಾತಕೋತ್ತರ ಅನಾಲಿಟಿಕಲ್ ರಸಾಯನಶಾಸ್ತ್ರ, ಅಧ್ಯಯನ ಮಂಡಳಿ ಎಂಬುದಾಗಿ ಪ್ರತ್ಯೇಕಿಸಿ ಪುನರ್ ರಚಿಸಿದ ಬಗ್ಗೆ.

ನಿರ್ಣಯ: ಸ್ನಾತಕೋತ್ತರ ರಸಾಯನಶಾಸ್ತ್ರ, (ಅನ್ವಯಿಕ ರಸಾಯನಶಾಸ್ತ್ರ, ಮತ್ತು ಸಾವಯವ ರಸಾಯನಶಾಸ್ತ್ರ, ಒಳಗೊಂಡಂತೆ) ಹಾಗೂ ಸ್ನಾತಕೋತ್ತರ ಅನಾಲಿಟಿಕಲ್ ರಸಾಯನಶಾಸ್ತ್ರ, ಅಧ್ಯಯನ ಮಂಡಳಿ ಎಂಬುದಾಗಿ ಪ್ರತ್ಯೇಕಿಸಿ **ಪುನರ್ ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.**

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ : ಸಾ.ಸ.1:4(2022)

ವಿಷಯ: ದಿನಾಂಕ 01.01.2006 ರಿಂದ ಜಾರಿಗೊಂಡ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಗೆ ಸಂಬಂಧಿಸಿದ ಅನುಶಾಸನದ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ ಪ್ರಕಾರ ವಿಶ್ವವಿದ್ಯಾನಿಲಯ/ ಸ್ನಾತಕೋತ್ತರ ಕೇಂದ್ರ/ ಘಟಕ ಕಾಲೇಜುಗಳ ಬೋಧಕರಿಗೆ ವೃತ್ತಿ ಪದೋನ್ನತಿ– ಸ್ಕ್ರೀನಿಂಗ್– ಕಂ-ಇವ್ಯಾಲ್ಯುವೇಶನ್/ ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ.

ನಿರ್ಣಯ: ದಿನಾಂಕ 01.01.2006 ರಿಂದ ಜಾರಿಗೊಂಡ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಗೆ ಸಂಬಂಧಿಸಿದ ಅನುಶಾಸನದ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ ಪ್ರಕಾರ ವಿಶ್ವವಿದ್ಯಾನಿಲಯ/ ಸ್ನಾತಕೋತ್ತರ ಕೇಂದ್ರ/ ಘಟಕ ಕಾಲೇಜುಗಳ ಬೋಧಕರಿಗೆ ವೃತ್ತಿ ಪದೋನ್ನತಿ– ಸ್ಕ್ರೀನಿಂಗ್– ಕಂ-ಇವ್ಯಾಲ್ಯುವೇಶನ್/ ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ ಪರೀಕ್ಷಾಂಗ : ಸಾ.ಸ.1:5(2022)

ವಿಷಯ: ಪರೀಕ್ಷಾ ಸುಧಾರಣಾ ಸಮಿತಿ ಸಭೆ ನಿರ್ಣಯಗಳ ಬಗ್ಗೆ.

ನಿರ್ಣಯ: ದಿನಾಂಕ 09.11.2021ರಂದು ನಡೆದ ಪರೀಕ್ಷಾ ಸುಧಾರಣ ಸಮಿತಿ ಸಭೆಯ ಶಿಫಾರಸ್ಸುಗಳನ್ನು ಪರಿಗಣಿಸಲು ಹಾಗೂ ಪರೀಕ್ಷಾ ಕಾರ್ಯಗಳನ್ನು ಆಯಾಯ ಶೈಕ್ಷಣಿಕ ವರ್ಷದ ಕಾಲಮಿತಿಯೊಳಗೆ ಮುಗಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಆಡಳಿತ : ಸಾ.ಸ.1:6(2022)

ವಿಷಯ: ನಿರ್ಮಲ ಹಾಸ್ಪಿಟಲ್, ಓಲ್ಡ್ ಟೌನ್, ಭದ್ರಾವತಿ, ಶಿವಮೊಗ್ಗ ಜಿಲ್ಲೆ ಈ ಆಸ್ಪತ್ರೆಯನ್ನು ವೈದ್ಯಕೀಯ ವೆಚ್ಚ ಮರುಭರಣೆಗೆ ಮಂಗಳೂರು ವಿಶ್ವವಿದ್ಯಾನಿಲಯ ಪರಿಗಣಿಸಿದ ಆಸ್ಪತ್ರೆಗಳ ಪಟ್ಟಿಯಲ್ಲಿ ಸೇರಿಸುವ ಬಗ್ಗೆ.

ನಿರ್ಣಯ: ಓಲ್ಡ್ ಟೌನ್, ಭದ್ರಾವತಿ, ಶಿವಮೊಗ್ಗ ಜಿಲ್ಲೆಯ ನಿರ್ಮಲ ಆಸ್ಪತ್ರೆಯನ್ನು ವೈದ್ಯಕೀಯ ವೆಚ್ಚ ಮರುಭರಣೆಗೆ ಮಂಗಳೂರು ವಿಶ್ವವಿದ್ಯಾನಿಲಯವು ಪರಿಗಣಿಸಿರುವ ಆಸ್ಪತ್ರೆಯ ಪಟ್ಟಿಯಲ್ಲಿ ಸೇರಿಸಲು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ : ಸಾ.ಸ.1:7(2022)

ವಿಷಯ: ಶ್ರೀ ವಿಜಯರಾಜ್ ಹೆಚ್. ಇವರು ಮಾನ್ಯ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ದಾವೆ ಸಂ. 2465/2015 (ಎಸ್.ಡಿ.ಇ) – ಮೇಲ್ಮನವಿ ಆದೇಶದ ಕುರಿತು.

ನಿರ್ಣಯ: ಶ್ರೀ. ವಿಜಯರಾಜ್ ಹೆಚ್. ಇವರು ಮಾನ್ಯ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ದಾವೆ ಸಂ.2465/205 (ಎಸ್.ಡಿ.ಇ) –ಮೇಲ್ಮನವಿ ಆದೇಶದ ಬಗ್ಗೆ ಸಿಂಡಿಕೇಟ್ ಸಭೆಗೆ ವಿವರಿಸಲಾಯಿತು.

ಕಾರ್ಯಸೂಚಿ ಸಂಖ್ಯೆ :ಡಿಇವಿ : ಸಾ.ಸ.1:8(2022)

ವಿಷಯ: ಕೊಂಕಣಿ ತೆಸೋರಸ್ ರಚನಾ ಕಾರ್ಯದ ಕೆಲಸ ಕಾರ್ಯಗಳಿಗೆ ಸಂಬಂಧಿಸಿ ಸಂಭಾವನೆ/ದರ ನಿಗದಿಪಡಿಸುವ ಬಗ್ಗೆ.

ನಿರ್ಣಯ: ಕೊಂಕಣಿ ತೆಸೋರಸ್ ರಚನಾ ಕಾರ್ಯದ ಕೆಲಸ ಕಾರ್ಯಗಳಿಗೆ ಸಂಬಂಧಿಸಿ ನಿಗದಿಪಡಿಸಿದ ಸಂಭಾವನೆ/ ದರವನ್ನು ಪಾವತಿಸಲು ಅನುಮೋದಿಸಲಾಯಿತು. .

ಕಾರ್ಯಸೂಚಿ ಸಂಖ್ಯೆ: ಡಿಇವಿ : ಸಾ.ಸ.1:9(2022)

ವಿಷಯ: ಕೊಂಕಣಿ ಜನಪದ ಕೋಶ ರಚನಾ ಕಾರ್ಯದ ಕೆಲಸ ಕಾರ್ಯಗಳಿಗೆ ಸಂಬಂಧಿಸಿ ಸಂಭಾವನೆ/ದರ ನಿಗದಿಪಡಿಸುವ ಬಗ್ಗೆ.

ನಿರ್ಣಯ: ಕೊಂಕಣಿ ಜನಪದ ಕೋಶ ರಚನಾ ಕಾರ್ಯದ ಕೆಲಸ ಕಾರ್ಯಗಳಿಗೆ ಸಂಬಂಧಿಸಿ ನಿಗದಿಪಡಿಸಿದ ಸಂಭಾವನೆ/ದರವನ್ನು ಪಾವತಿಸಲು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ ಡಿಇವಿ : ಸಾ.ಸ.1:10(2022)

ವಿಷಯ: ಮೂಡಬಿದಿರೆ ತಾಲೂಕಿನ ಬನ್ನಡ್ಕದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜನ್ನು 2021-22ನೇ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸುವ ಬಗ್ಗೆ.

ನಿರ್ಣಯ: ಮೂಡಬಿದಿರೆ ತಾಲೂಕಿನ ಬನ್ನಡ್ಕದಲ್ಲಿ ಆರಂಭಿಸಿರುವ ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜನ್ನು ಆಂತರಿಕ ಸಂಪನ್ಮೂಲದಿಂದಲೇ ನಡೆಸಬೇಕೆಂದು ಸರಕಾರ ನೀಡಿದ ಆದೇಶವನ್ನು ಸಿಂಡಿಕೇಟ್ ಸಭೆಯ ಗಮನಕ್ಕೆ ತರಲಾಯಿತು.

ಕಾರ್ಯಸೂಚಿ ಸಂಖ್ಯೆ :ಸಿಬ್ಬಂದಿ : ಸಾ.ಸ.1:11(2022)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ, ಸ್ನಾತಕೋತ್ತರ ವಿಭಾಗ ಸ್ಥಾಪನೆ ಮತ್ತು ಹುದ್ದೆಗಳ ಸೃಜನೆ ಬಗ್ಗೆ ರಚಿಸಿದ ಪರಿನಿಯಮದ ಅನುಮೋದನೆ ಬಗ್ಗೆ.

ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ, ಸ್ನಾತಕೋತ್ತರ ವಿಭಾಗ ಸ್ಥಾಪನೆ ಮತ್ತು ಹುದ್ದೆಗಳ ಸೃಜನೆ ಬಗ್ಗೆ ರಚಿಸಿದ ಪರಿನಿಯಮವನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ : ಸಾ.ಸ.1:12(2022)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಜೀವ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಸ್ಥಾಪನೆ ಮತ್ತು ಹುದ್ದೆಗಳ ಸೃಜನೆ ಬಗ್ಗೆ ರಚಿಸಿದ ಪರಿನಿಯಮದ ಅನುಮೋದನ ಬಗ್ಗೆ.

ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಜೀವ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಸ್ಥಾಪನೆ ಮತ್ತು ಹುದ್ದೆಗಳ ಸೃಜನೆ ಬಗ್ಗೆ ರಚಿಸಿದ ಪರಿನಿಯಮವನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ : ಸಾ.ಸ.1:13(2022)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಫುಡ್ ಸಾಯನ್ಸ್ ಮತ್ತು ನ್ಯೂಟ್ರಿಷನ್ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಸ್ಥಾಪನೆ ಮತ್ತು ಹುದ್ದೆಗಳ ಸೃಜನೆ ಬಗ್ಗೆ ರಚಿಸಿದ ಪರಿನಿಯಮದ ಅನುಮೋದನೆ ಬಗ್ಗೆ

ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಫುಡ್ ಸಾಯನ್ಸ್ ಮತ್ತು ನ್ಯೂಟ್ರಿಷನ್ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಸ್ಥಾಪನೆ ಮತ್ತು ಹುದ್ದೆಗಳ ಸೃಜನೆ ಬಗ್ಗೆ ರಚಿಸಿದ ಪರಿನಿಯಮವನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ : ಸಾ.ಸ.1:14(2022)

ವಿಷಯ: ಶ್ರೀಮತಿ ಕವಿತಾ ಕೆ. ಇವರಿಗೆ ಬೆರಳಚ್ಚುಗಾರ-ವ-ಗುಮಾಸ್ತ ಹುದ್ದೆಯಿಂದ ದ್ವಿತೀಯ ದರ್ಜೆ ಸಹಾಯಕ ಹುದ್ದೆಗೆ ವೃಂದ ಬದಲಾವಣೆಗೊಳಿಸಲು ಅನುಮತಿ ನೀಡುವ ಬಗ್ಗೆ

ನಿರ್ಣಯ: ಶ್ರೀಮತಿ ಕವಿತಾ ಕೆ. ಇವರಿಗೆ ಬೆರಳಚ್ಚುಗಾರ-ವ-ಗುಮಾಸ್ತ ಹುದ್ದೆಯಿಂದ ದ್ವಿತೀಯ ದರ್ಜೆ ಸಹಾಯಕ ಹುದ್ದೆಗೆ ವೃಂದ ಬದಲಾವಣೆಗೊಳಿಸಲು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ : ಸಾ.ಸ.1:15(2022)

ವಿಷಯ: ಸಹಕಾರಿ ಸಂಘ/ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ವಿಶ್ವವಿದ್ಯಾನಿಲಯದ ಮೂಲಕ ಪರೀಕ್ಷೆ/ಮೌಲ್ಯಮಾಪನ ಕಾರ್ಯವನ್ನು ನಡೆಸುವ ಪ್ರಸ್ತಾವದ ಬಗ್ಗೆ

ನಿರ್ಣಯ: ಸಹಕಾರಿ ಸಂಘ/ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ವಿಶ್ವವಿದ್ಯಾನಿಲಯದ ಮೂಲಕ ಪರೀಕ್ಷೆ/ಮೌಲ್ಯಮಾಪನ ಕಾರ್ಯವನ್ನು ನಡೆಸಲು ಬೇಡಿಕೆ ಬಂದಾಗ ಕುಲಸಚಿವರು (ಪರೀಕ್ಷಾಂಗ) ಇವರ ಮೂಲಕ ನಡೆಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪ.ಜಾ.ಪ.ಪಂ ಘಟಕ : ಸಾ.ಸ.1:16(2022)

ವಿಷಯ : ಶ್ರೀ ಮೌಲಪ್ಪ, ಸಂಶೋಧನಾ ವಿದ್ಯಾರ್ಥಿ, ಸಮಾಜ ಕಾರ್ಯ ವಿಭಾಗ ಇವರು ವಿದೇಶದಲ್ಲಿ ನಡೆಯುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಸಂಶೋಧನಾ ಪತ್ರಿಕೆಯನ್ನು ಮಂಡಿಸಲು ಅನುಮತಿ ಹಾಗೂ ತತ್ಸಬಂಧ ತಗಲುವ ಆರ್ಥಿಕ ಸಹಾಯಧನ ನೀಡುವ ಬಗ್ಗೆ.

ನಿರ್ಣಯ: ಶ್ರೀ ಮೌಲಪ್ಪ, ಸಂಶೋಧನಾ ವಿದ್ಯಾರ್ಥಿ, ಸಮಾಜ ಕಾರ್ಯ ವಿಭಾಗ ಇವರು ವಿದೇಶದಲ್ಲಿ ನಡೆಯುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಸಂಶೋಧನಾ ಪತ್ರಿಕೆಯನ್ನು ಮಂಡಿಸಲು ಅನುಮತಿ ಹಾಗೂ ತತ್ಸಂಬಂಧ ತಗಲುವ ಆರ್ಥಿಕ ಸಹಾಯಧನ ನೀಡಲು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪ.ಜಾ.ಪ.ಪಂ ಘಟಕ : ಸಾ.ಸ.1:17(2022)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಭೌತಶಾಸ್ತ್ರ ವಿಭಾಗದ ಸಂಶೋಧನಾ ವಿದ್ಯಾರ್ಥಿಗಳು ವಿದೇಶದಲ್ಲಿ ನಡೆಯುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಸಂಶೋಧನಾ ಪತ್ರಿಕೆಯನ್ನು ಮಂಡಿಸಲು ಅನುಮತಿ ಹಾಗೂ ತತ್ಸಬಂಧ ತಗಲುವ ಆರ್ಥಿಕ ಸಹಾಯಧನ ನೀಡುವ ಬಗ್ಗೆ

ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯದ ಭೌತಶಾಸ್ತ್ರ ವಿಭಾಗದ ಸಂಶೋಧನಾ ವಿದ್ಯಾರ್ಥಿಗಳು ವಿದೇಶದಲ್ಲಿ ನಡೆಯುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಸಂಶೋಧನಾ ಪತ್ರಿಕೆಯನ್ನು ಮಂಡಿಸಲು ಅನುಮತಿ ಮತ್ತು ತತ್ಸಂಬಂಧ ತಗಲುವ ಆರ್ಥಿಕ ಸಹಾಯಧನ ನೀಡಲು ಘಟನೋತ್ತರ ಮಂಜೂರಾತಿ ನೀಡಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ : ಸಾ.ಸ.1:18(2022)

ವಿಷಯ : 2020-21ನೇ ಸಾಲಿನ ಬಿ.ಎ./ಬಿ.ಎಸ್ಸಿ./ಬಿ.ಕಾಂ./ಬಿ.ಎಸ್.ಡಬ್ಲ್ಯು/ಬಿ.ಎಡ್./ ಬಿ.ಎ.(ಹೆಚ್.ಆರ್.ಡಿ.)/ ಬಿ.ಬಿ.ಎಂ./ ಬಿ.ಹೆಚ್.ಎಂ./ ಬಿ.ಹೆಚ್.ಎಸ್./ ಬಿ.ಸಿ.ಎ./ ಬಿ.ಎಸ್ಸಿ. ಫ್ಯಾಷನ್ ಡಿಸೈನ್ ಮತ್ತು ಬಿ.ಎಸ್ಸಿ. ಇಂಟೀರಿಯರ್ ಡಿಸೈನ್ ಆಂಡ್ ಡೆಕೋರೇಶನ್/ಬಿ.ಪಿ.ಎಡ್./ಬಿ.ಎಸ್ಸಿ. (ಎಫ್.ಎನ್.ಡಿ.)/ ಬಿ.ಎ. ಸೆಕ್ಯೂರಿಟಿ ಆಂಡ್ ಡಿಟೆಕ್ಟಿವ್ ಸೈನ್ಸ್/ಸ್ಪೀಚ್ ಆಂಡ್ ಹಿಯರಿಂಗ್ ಪದವಿ ಕೋರ್ಸಿಗೆ ಸಂಬಂಧಿಸಿದಂತೆ ಅಧ್ಯಾಪಕರ ಜ್ಯೇಷ್ಠತಾ ಪಟ್ಟಿ ಅನುಮೋದನೆ ಕುರಿತು.

ನಿರ್ಣಯ: ಜ್ಯೇಷ್ಠತಾ ಪಟ್ಟಿಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ : ಸಾ.ಸ.1:19(2022))

ವಿಷಯ : ಐಟಿ ಕನ್ಸಲ್ಟೆಂಟ್‌ರವರನ್ನು ತಾತ್ಕಾಲಿಕ ನೆಲೆಯಲ್ಲಿ ನೇಮಕಾತಿ ಮಾಡುವ ಬಗ್ಗೆ.

ನಿರ್ಣಯ:

| | | | |
|---|---|---|---|
| ಶ್ರೀ. ವೆಂಕಟರಾವ್ | - Project Manager | - | ರೂ. 50,000.00 |
| ಶ್ರೀ. ವಿನಯ್ ಬಿ.ಕೆ. | - IT Consultant/Software Engineer | - | ರೂ. 25,000.00 |
| ಶ್ರೀ ಜೀವನ ಪ್ರಕಾಶ | - Test Engineer | - | ರೂ. 25,000.00 |
| ಶ್ರೀ. ಕರುಣಾಕರ್ | - Data Analyst | - | ರೂ. 25,000.00 |
| ಶ್ರೀ.ಗೋಪಾಲ ಹೆಚ್.ಜಿ. | - Hardware Consultant | - | ರೂ. 20,000.00 |

ಈ ಮೇಲಿನ ಅಭ್ಯರ್ಥಿಗಳನ್ನು ತಾತ್ಕಾಲಿಕ ನೆಲೆಯಲ್ಲಿ ನೇಮಕಾತಿಗೊಳಿಸಿ ಕರ್ತವ್ಯಕ್ಕೆ ಸೇರಿದ ದಿನಾಂಕದಿಂದ ಸಂಭಾವನೆಯನ್ನು ಪಾವತಿಸಲು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ : ಸಾ.ಸ.1:20(2022))

ವಿಷಯ : ಪರೀಕ್ಷಾ ಕೇಂದ್ರದಲ್ಲಿ ಡಾಟಾ ಎಂಟ್ರಿ ಆಪರೇಟರ್‌ಗಳಾಗಿ ಕರ್ತವ್ಯ ನಿರ್ವಹಿಸಿರುವ ಸಿಬ್ಬಂದಿಗಳಿಗೆ ಸಂಭಾವನೆ ನಿಗದಿಪಡಿಸುವ ಬಗ್ಗೆ.

ನಿರ್ಣಯ: ಪರೀಕ್ಷಾ ಮೌಲ್ಯಮಾಪನ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಡಾಟಾ ಎಂಟ್ರಿ ಆಪರೇಟರ್‌ಗಳಿಗೆ ಪ್ರತೀ ಎಂಟ್ರಿಗೆ ಪೈಸೆ. 0.50ರಂತೆ ಸಂಭಾವನೆಯನ್ನು ಪಾವತಿಸಲು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ : ಸಾ.ಸ.1:21(2022))

ವಿಷಯ : ಸ್ನಾತಕೋತ್ತರ ರಾಜ್ಯಶಾಸ್ತ್ರ ಕಾರ್ಯಕ್ರಮಕ್ಕೆ ವಿದ್ಯಾರ್ಥಿ ಪ್ರವೇಶಾರ್ಹತೆಗೆ ಪರಿಗಣಿಸುವ ಬಗ್ಗೆ.

ನಿರ್ಣಯ: ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಮಂಡಿಸಿ ನಂತರ ಸಿಂಡಿಕೇಟ್ ಸಭೆಗೆ ಮಂಡಿಸಲು ನಿರ್ಣಯಿಸಿ ಮುಂದೂಡಲಾಯಿತು.

ಕಾರ್ಯಸೂಚಿ ಸಂಖ್ಯೆ:ಸಾರ್ವತ್ರಿಕ: ಸಾ.ಸ.1:22(2022)

ವಿಷಯ : ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿ, ಕೊಲ್ನಾಡು, ಇಲ್ಲಿ ನಡೆಯುವ ರಾಜ್ಯ ಮಟ್ಟದ ಕೃಷಿ ಮೇಳಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಸಹಯೋಗ ಮತ್ತು ಸಹಕಾರ ಒದಗಿಸುವ ಬಗ್ಗೆ.

ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯದ ಸಹಯೋಗ ಮತ್ತು ಸಹಕಾರ ಹಾಗೂ ಮೊತ್ತ ರೂ 6,00,000/-ನ್ನು ರಾಜ್ಯ ಮಟ್ಟದ ಕೃಷಿ ಮೇಳಕ್ಕೆ ಒದಗಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ: ಸಾ.ಸ.1:23(2022)

ವಿಷಯ : ದ.ಕ. ಜಿಲ್ಲಾ ಪಂಚಾಯತ್ ವ್ಯಾಪ್ತಿಗೊಳಪಡುವ 3 ಸರಕಾರಿ ಶಾಲೆಗಳನ್ನು ದತ್ತು ತೆಗೆದುಕೊಳ್ಳುವ ಬಗ್ಗೆ.

ನಿರ್ಣಯ: ದ.ಕ. ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳಪಡುವ **1.** ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಲಾರ್, ಪಾವೂರು. **2.** ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಸೈಮದಕ, ಅಸೈಗೋಳಿ. **3.** ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೊಕ್ಕಡ ಸದರಿ ಮೂರು ಸರಕಾರಿ ಶಾಲೆಗಳನ್ನು ಮಂಗಳೂರು ವಿಶ್ವವಿದ್ಯಾನಿಲಯವು ದತ್ತು ತೆಗೆದುಕೊಳ್ಳಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ: ಸಾ.ಸ.1:24(2022)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯದ ಅಂತರಾಷ್ಟ್ರೀಯ ವಿದ್ಯಾರ್ಥಿಗಳು ವಾಸ್ತವ್ಯವಿರುವ ವೆಂಕಟ್ ರೆಸಿಡೆನ್ಸಿ ಕಟ್ಟಡದ ಕರಾರು ಒಪ್ಪಂದದ ಅವಧಿಯು ದಿನಾಂಕ 31.12.2021ರಂದು ಮುಗಿದಿರುವುದರಿಂದ ಮುಂದಿನ ಅವಧಿಗ ವಿಸ್ತರಿಸುವ ಬಗ್ಗೆ.

ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯದ ಅಂತರಾಷ್ಟ್ರೀಯ ವಿದ್ಯಾರ್ಥಿಗಳು ವಾಸ್ತವ್ಯವಿರುವ ವೆಂಕಟ್ ರೆಸಿಡೆನ್ಸಿ ಕಟ್ಟಡದ ಕರಾರು ಒಪ್ಪಂದದ ಅವಧಿಯು ದಿನಾಂಕ 31.12.2021ರಂದು ಮುಗಿದಿದ್ದು ಮುಂದಿನ ಅವಧಿಗೆ ವಿಸ್ತರಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ: ಸಾ.ಸ.1:25(2022)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯದ ಅಂತರಾಷ್ಟ್ರೀಯ ವಿದ್ಯಾರ್ಥಿಗಳು ವಾಸ್ತವ್ಯವಿರುವ ಎ.ಎಸ್.ಕೆ. ಟವರ್ಸ್, ನಾಟೆಕಲ್ ಇಲ್ಲಿನ ಕಟ್ಟಡದ 08 ಸಂಖ್ಯೆಯ ಫ್ಲಾಟ್‌ಗಳ ಕರಾರು ಒಪ್ಪಂದದ ಅವಧಿಯು ಮುಗಿದಿದ್ದು, ಮುಂದಿನ 11 ತಿಂಗಳ ಅವಧಿಗೆ ಮುಂದುವರಿಸುವ ಬಗ್ಗೆ.

ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯದ ಅಂತರಾಷ್ಟ್ರೀಯ ವಿದ್ಯಾರ್ಥಿಗಳು ವಾಸ್ತವ್ಯವಿರುವ ಎ.ಎಸ್.ಕೆ. ಟವರ್ಸ್, ನಾಟೆಕಲ್ ಇಲ್ಲಿನ ಕಟ್ಟಡದ 08 ಸಂಖ್ಯೆಯ ಫ್ಲಾಟ್‌ಗಳ ಕರಾರು ಒಪ್ಪಂದದ ಅವಧಿಯು ದಿನಾಂಕ 15.12.2021ರಂದು ಮುಗಿದಿದ್ದು ಮುಂದಿನ 11 ತಿಂಗಳ ಅವಧಿಗೆ ಮುಂದುವರಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಆಡಳಿತ: ಸಾ.ಸ.1:26(2022)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯದ ಗ್ರಂಥಾಲಯಕ್ಕೆ ಅಗತ್ಯವಿರುವ Double Faced Steel Book Rack ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

ನಿರ್ಣಯ: ದಿನಾಂಕ 19.01.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು

ಕಾರ್ಯಸೂಚಿ ಸಂಖ್ಯೆ: ಆಡಳಿತ: ಸಾ.ಸ.1:27(2022)

ವಿಷಯ : ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು, ಇಲ್ಲಿಗೆ ಮರದ ಪೀಠೋಪಕರಣಗಳ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

ನಿರ್ಣಯ: ದಿನಾಂಕ 19.01.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು

ಕಾರ್ಯಸೂಚಿ ಸಂಖ್ಯೆ: ಇಡಿ : ಸಾ.ಸ.1:28(2022)

ವಿಷಯ : Supplying of Sanitary Materials at Mangalore University, Mangalagangothri (call 2) – ಟೆಂಡರ್ ಅನುಮೋದನೆ ಬಗ್ಗೆ.

ನಿರ್ಣಯ: ದಿನಾಂಕ 19.01.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು

ಕಾರ್ಯಸೂಚಿ ಸಂಖ್ಯೆ:ಡಿಇವಿ : ಸಾ.ಸ.1:29(2022)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ Skill Development ಯೋಜನೆಯನ್ನು ಕಾರ್ಯಗತಗೊಳಿಸಲು M/s Caddmaxx Solutions Private Ltd., Bangalore ಇವರ ಸೇವೆಯನ್ನು ಬಳಸಿಕೊಳ್ಳುವ ಬಗ್ಗೆ.

ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿ Skill Development ಯೋಜನೆಯನ್ನು ಕಾರ್ಯಗತಗೊಳಿಸಲು M/s Caddmaxx Solutions Private Ltd., Bangalore ಇವರ ಸೇವೆಯನ್ನು ಪಡೆಯುವ ಪ್ರಸ್ತಾವನೆಯನ್ನು ಅನುಮೋದಿಸಲು ನಿರ್ಣಯಿಸಲಾಯಿತು.

ಸದರಿ ಸಂಸ್ಥೆಯೊಂದಿಗೆ ವಿಶ್ವವಿದ್ಯಾನಿಲಯವು MoU ಮಾಡಿ ಮುಂದಿನ ಸಿಂಡಿಕೇಟು ಸಭೆಯಲ್ಲಿ ಮಂಡಿಸುವಂತೆ ಸೂಚಿಸಲಾಯಿತು.

ಕಾರ್ಯಸೂಚಿ ಸಂಖ್ಯೆ :ಪರೀಕ್ಷಾಂಗ : ಸಾ.ಸ.1:30(2022)

ವಿಷಯ : ಡಾ. ಶಿವಾನಂದ ನಾಯಕ್ ಬಿ. ಇವರಿಗೆ ಡಿ.ಎಸ್‌ಸಿ. ಪದವಿ ಪ್ರದಾನ ಬಗ್ಗೆ.

ನಿರ್ಣಯ: ಡಾ. ಶಿವಾನಂದ ನಾಯಕ್ ಬಿ., ಇವರಿಗೆ ಡಿ.ಎಸ್‌ಸಿ. ಪದವಿ ಪ್ರಧಾನ ಮಾಡಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ :ಸಿಂಡಿಕೇಟು : ಸಾ.ಸ.1:31(2022)

ವಿಷಯ : ಡಾ. ಪಾರ್ವತಿ ಅಪ್ಪಯ್ಯ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ.

ನಿರ್ಣಯ: ಪ್ರಾಂಶುಪಾಲರ ಜ್ಯೇಷ್ಠತಾ ಪಟ್ಟಿಯನ್ನು 2016ರಲ್ಲಿ ತಯಾರಿಸಲಾಗಿದ್ದು, ಜ್ಯೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಿ ತಿದ್ದುಪಡಿಗೊಳಿಸಲು ಕ್ರಮ ಕೈಗೊಂಡು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗುವುದು.

ಕಾರ್ಯಸೂಚಿ ಸಂಖ್ಯೆ : ಡಿಇವಿ : ಸಾ.ಸ.1:32(2022)

ವಿಷಯ : CARER, ಮಂಗಳೂರು ವಿಶ್ವವಿದ್ಯಾನಿಲಯ – Quantulus-1220 Liquid Scintillation Counting (LSC) Systemನ ಬಿಡಿ ಭಾಗಗಳ ದುರಸ್ತಿ ಬಗ್ಗೆ.

ನಿರ್ಣಯ: ದಿನಾಂಕ 19.01.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು

ಕಾರ್ಯಸೂಚಿ ಸಂಖ್ಯೆ : ಡಿಇವಿ : ಸಾ.ಸ.1:33(2022)

ವಿಷಯ : ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ – ನಾಲ್ಕು ಪಠ್ಯಪುಸ್ತಕಗಳನ್ನು ಮುದ್ರಿಸುವ ಪ್ರಸ್ತಾವನೆ ಬಗ್ಗೆ.

ನಿರ್ಣಯ: ದಿನಾಂಕ 19.01.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು

ಕಾರ್ಯಸೂಚಿ ಸಂಖ್ಯೆ : ಡಿಇವಿ : ಸಾ.ಸ.1:34(2022)

ವಿಷಯ : ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ – ಪಟ್ಟೋಲೆ ಪಳಮ ಎಂಬ ಪುಸ್ತಕವನ್ನು ಮುದ್ರಿಸುವ ಪ್ರಸ್ತಾವನೆ ಬಗ್ಗೆ.

ನಿರ್ಣಯ: ದಿನಾಂಕ 19.01.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು

ಕಾರ್ಯಸೂಚಿ ಸಂಖ್ಯೆ : ಡಿಇವಿ : ಸಾ.ಸ.1:35(2022)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯ, ಗಣಕಯಂತ್ರ ಕೇಂದ್ರದ Firewall, Networking Device ಮತ್ತು Wifi Deviceನ ವಾರ್ಷಿಕ ನಿರ್ವಹಣೆಯ ಬಗ್ಗೆ.

ನಿರ್ಣಯ: ದಿನಾಂಕ 19.01.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು

ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ: ಸಾ.ಸ.1:36(2022)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧ ಹಾಗೂ ವಿಶ್ವವಿದ್ಯಾನಿಲಯ ಆವರಣದ ವಿವಿಧ ಕಟ್ಟಡಗಳ ಮತ್ತು ಶೌಚಾಲಯಗಳ ಶುಚಿತ್ವ ಕಾರ್ಯಕ್ಕೆ ಶುಚಿತ್ವ ಸಾಮಾಗ್ರಿಗಳನ್ನು ಸರಬರಾಜು ಮಾಡುವ ಕುರಿತು ಟೆಂಡರು (2ನೇ ಕರೆ) ಅನುಮೋದನೆ ಬಗ್ಗೆ.

ನಿರ್ಣಯ: ಪುನರಾವರ್ತಿತ ಕಾರ್ಯಸೂಚಿಯಾಗಿರುವುದರಿಂದ ಹಿಂಪಡೆಯಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ : ಸಾ.ಸ.1:37(2022)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯ ಆವರಣ, ಮಂಗಳಗಂಗೋತ್ರಿ, ಘಟಕ ಕಾಲೇಜುಗಳು ಹಾಗೂ ಸ್ನಾತಕೋತ್ತರ ಕೇಂದ್ರ, ಜ್ಞಾನ ಕಾವೇರಿ, ಚಿಕ್ಕ ಅಳುವಾರ ಇಲ್ಲಿಗೆ ಭದ್ರತಾ ಸೂಪರ್ ವೈಸರ್ ಹಾಗೂ ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಒದಗಿಸುವ ಬಗ್ಗೆ.

ನಿರ್ಣಯ: ದಿನಾಂಕ 19.01.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ಮೆ. ಶ್ರೀ. ರಂಗನಾಥ ಎಂಟರ್‌ಪ್ರೈಸಸ್, ಮೈಸೂರು ಇವರಿಗೆ ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ನೀಡಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ : ಸಾ.ಸ.1:38(2022)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯ ಆವರಣ, ಮಂಗಳಗಂಗೋತ್ರಿ, ಘಟಕ ಕಾಲೇಜುಗಳು ಹಾಗೂ ಸ್ನಾತಕೋತ್ತರ ಕೇಂದ್ರ, ಜ್ಞಾನ ಕಾವೇರಿ, ಚಿಕ್ಕ ಅಳುವಾರ ಇಲ್ಲಿಗೆ ಶುಚಿತ್ವ, ತೋಟಗಾರಿಕಾ ಹಾಗೂ 'ಡಿ' ಗ್ರೂಪ್ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಒದಗಿಸುವ ಬಗ್ಗೆ.

ನಿರ್ಣಯ: ದಿನಾಂಕ 19.01.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ಮೆ. ಶ್ರೀ. ರಂಗನಾಥ ಎಂಟರ್‌ಪ್ರೈಸಸ್, ಮೈಸೂರು ಇವರಿಗೆ ಶುಚಿತ್ವ, ತೋಟಗಾರಿಕಾ ಹಾಗೂ ಗ್ರೂಪ್ 'ಡಿ' ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ನೀಡಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ : ಸಾ.ಸ.1:39(2022)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯದ ಅಂತರಾಷ್ಟ್ರೀಯ ವಿದ್ಯಾರ್ಥಿ ಕೇಂದ್ರಕ್ಕೆ ನಿರ್ದೇಶಕರ ಹಾಗೂ ಉಪ ನಿರ್ದೇಶಕರ ನೇಮಕಾತಿ ಮಾಡುವ ಬಗ್ಗೆ.

ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯದ ಅಂತರಾಷ್ಟ್ರೀಯ ವಿದ್ಯಾರ್ಥಿ ಕೇಂದ್ರಕ್ಕೆ ಪ್ರೊ. ಬಿ. ಹೆಚ್ ಶೇಖರ್, ಗಣಕ ವಿಜ್ಞಾನ ವಿಭಾಗ ಇವರನ್ನು ನಿರ್ದೇಶಕರಾಗಿ ಮತ್ತು ಡಾ. ಪ್ರಿಯಾ ಕೆ., ಸಹಾಯಕ ಪ್ರಾಧ್ಯಾಪಕರು ಸಾಗರ ಭೂ ವಿಜ್ಞಾನ ವಿಭಾಗ ಇವರನ್ನು ಉಪನಿರ್ದೇಶಕರಾಗಿ ನೇಮಕ ಮಾಡಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ:: ಸಿಬ್ಬಂದಿ : ಸಾ.ಸ.1:40(2022)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರ ಕಚೇರಿಗೆ ವಿಶೇಷಾಧಿಕಾರಿಯವರನ್ನು ನೇಮಕಗೊಳಿಸುವ ಬಗ್ಗೆ.

ನಿರ್ಣಯ: ಡಾ. ಶ್ರೀನಾಥ್ ಬಿ.ಎಸ್., ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಸೂಕ್ಷ್ಮಾಣು ಜೀವ ವಿಜ್ಞಾನ ವಿಭಾಗ, ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ, ಕುಶಾಲನಗರ ಇವರನ್ನು ವಿಶೇಷಾಧಿಕಾರಿಯಾಗಿ ನೇಮಕ ಮಾಡಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ : ಸಾ.ಸ.1:41(2022)

ವಿಷಯ : ಎಂ.ಎಸ್ಸಿ. ಸೈಬರ್ ಸೆಕ್ಯೂರಿಟಿ ಕಾರ್ಯಕ್ರಮ – ಕೈಗಾರಿಕಾ ಪರಿಣಿತರಿಂದ ಉಪನ್ಯಾಸ ಏರ್ಪಡಿಸಲು ಅನುಮತಿ ನೀಡುವ ಬಗ್ಗೆ.

ನಿರ್ಣಯ: ಎಂ.ಎಸ್ಸಿ ಸೈಬರ್ ಸೆಕ್ಯೂರಿಟಿ ವಿದ್ಯಾರ್ಥಿಗಳಿಗೆ ಕೈಗಾರಿಕಾ ತಜ್ಞರಿಂದ ತರಗತಿ ನಡೆಸಲು ಗಂಟೆಯೊಂದರ ಉಪನ್ಯಾಸಕ್ಕೆ ರೂ.1,000.00 ರಂತೆ ಗೌರವಧನ ಮತ್ತು ನಿಯಮಾನುಸಾರ ಪ್ರಯಾಣ ಭತ್ಯೆ ಪಾವತಿಸುವ ಹಾಗೂ ಅತಿಥಿ ಗೃಹದಲ್ಲಿ ಉಚಿತ ವಾಸ್ತವ್ಯ ಒದಗಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ವಿದ್ಯಾರ್ಹತೆ, ಹೊರಗಡೆಯಿಂದ ಆಹ್ವಾನಿಸುವ ತಜ್ಞರ ಪಟ್ಟಿ, ಅವರು ತೆಗೆದುಕೊಳ್ಳುವ ಅವಧಿ ಮತ್ತು ತರಗತಿಗಳ ಪೂರ್ಣ ಮಾಹಿತಿಯನ್ನು ಕಾರ್ಯಸೂಚಿಯಲ್ಲಿ ವಿವರವಾಗಿ ಸೂಚಿಸಿ ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ಸೂಚಿಸಲಾಯಿತು.

ಇತರ ವಿಷಯಗಳು

1. ರಾಷ್ಟ್ರೀಯ ಶಿಕ್ಷಣ ನೀತಿಯ ಕುರಿತು ಕಾರ್ಯಾಗಾರವನ್ನು ಮಂಗಳೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಪದವಿ ಪೂರ್ವ ಕಾಲೇಜುಗಳಲ್ಲಿ ಮನ್ವಂತರ ಸಂಸ್ಥೆಯ ಮೂಲಕ ನಡೆಸುವಂತೆ ಹಾಗೂ ಕುಲಸಚಿವರು ಈ ಬಗ್ಗೆ ಪತ್ರವನ್ನು ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ದ.ಕ/ಉಡುಪಿ/ಕೊಡಗು ಜಿಲ್ಲೆ ಇವರಿಗೆ ಅನುಮತಿ ಪತ್ರ ನೀಡುವಂತೆ ನಿರ್ಣಯಿಸಲಾಯಿತು. ಸದರಿ ಕಾರ್ಯಕ್ರಮದ ರೂಪುರೇಷೆಗಳನ್ನು ವಿಶ್ವವಿದ್ಯಾನಿಲಯಕ್ಕೆ ನೀಡಿ ಅನುಮತಿ ಪಡೆದುಕೊಳ್ಳುವುದು.

ಮಾನ್ಯ ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

Sd/-
ಕುಲಪತಿಗಳು

Sd/-
ಕುಲಸಚಿವರು